ಶ್ರೀ ಬಿ. ಬಸವಲಿಂಗಪ್ಪ (ಅರಣ್ಯ ಮತ್ತು ಪಶುಸಂಗೋಪನೆ ಸಚಿವರು).—

(ಅ) ಇಲ್ಲ

(ಆ) ಉದ್ಭವಿಸುವುದಿಲ್ಲ

(ಇ) ಉದ್ಭವಿಸುವುದಿಲ್ಲ

(ಈ) ಉದ್ಭವಿಸುವುದಿಲ್ಲ

## ಶ್ರೀರಾಮಪುರದಲ್ಲಿರುವ ಬಲ್ಕ್‌ವೆಂಡಿಂಗ್ ಬೂತ್‌ಗಳಲ್ಲಿ ಕನ್ಸೇಶನರಿ ಷಿಷ್‌ನ್ನು ರದ್ದು ಮಾಡದಿರುವ ಬಗ್ಗೆ

೯೦೫. ಶ್ರೀ ನಾರಾಯಣಸ್ವಾಮಿ (ಬೇತಮಂಗಲ).—ಮಾನ್ಯ ಅರಣ್ಯ ಮತ್ತು ಪಶುಸಂಗೋಪನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಶ್ರೀರಾಮಪುರದಲ್ಲಿರುವ ಬಲ್ಕ್‌ವೆಂಡಿಂಗ್ ಬೂತ್ ನಂ. ೩೧೫, ೩೧೭, ಮತ್ತು ೩೧೮ನ್ನು ಯಾವಾಗ ಪ್ರಾರಂಭಿಸಲಾಯಿತು?

ಆ) ಈ ಬಲ್ಕ್‌ವೆಂಡಿಂಗ್ ಬೂತ್‌ಗಳು ಪ್ರಾರಂಭವಾದಾಗಿನಿಂದ ಇಲ್ಲಿಯವರೆಗೆ ಕಲಬೆರಕೆ ಹಾಗೂ ಈ ಬೂತುಗಳಿಂದ ಮದರ್ ಡೈರಿಗೆ ಕಟ್ಟಿದ ಚೆಕ್ ಹಣವಿಲ್ಲದೆ ಬೌನ್ಸ್ ಆಗಿರುವ ಪ್ರಕರಣಗಳು ಇವೆಯೇ?

ಇ) ಇದ್ದರೆ ಈ ಬೂತುಗಳಲ್ಲಿ ಪ್ರಾರಂಭವಾದಾಗಿನಿಂದ ಇಲ್ಲಿಯವರೆಗೆ ಎಷ್ಟು ಕಲಬೆರಕೆಯ ಪ್ರಕರಣಗಳನ್ನು ಪತ್ತೆ ಮಾಡಿ ನೋಟೀಸ್ ನೀಡಲಾಗಿದೆ ಹಾಗೂ ಎಷ್ಟು ಬಾರಿ ಹಣವಿಲ್ಲದೆ ಚೆಕ್‌ಗಳು ಬೌನ್ಸ್ ಆಗಿದ್ದಕ್ಕಾಗಿನೋಟೀಸ್ ನೀಡಲಾಗಿದೆ (ಪ್ರತಿಯೊಂದು ಬೂತಿನ ಪ್ರತ್ಯೇಕ ವಿವರಗಳನ್ನು ನೀಡುವುದು)?

ಈ) ಹಲವಾರು ಬಾರಿ ಮೇಲಿನ ಎರಡು ಪ್ರಕರಣಗಳಿಗಾಗಿ ನೋಟೀಸ್‌ಗಳನ್ನು ನೀಡಿದ್ದರೂ ಸಹ ಇದುವರೆಗೂ ಈ ಬೂತುಗಳ ಕನ್ಸೇಷನ್‌ಷಿಪ್ ಅನ್ನು ರದ್ದುಗೊಳಿಸದಿರಲು ಕಾರಣಗಳೇನು?

ಉ) ಸರ್ಕಾರವು ಈ ಬೂತುಗಳ ಕನ್ಸೇಷನ್‌ಷಿಪ್ ಅನ್ನು ರದ್ದುಗೊಳಿಸಿ ಇವರ ಜಾಗಕ್ಕೆ ನಿಷ್ಠಾವಂತ ಮಾಜಿ ಯೋಧರನ್ನು ನೇಮಿಸಲು ಕ್ರಮ ಕೈಗೊಳ್ಳುವುದೇ?

ಶ್ರೀ ಬಿ. ಬಸವಲಿಂಗಪ್ಪ (ಅರಣ್ಯ ಮತ್ತು ಪಶುಸಂಗೋಪನ ಸಚಿವರು).—

ಅ)

| ಬೂತ್ ಸಂಖ್ಯೆ | ಪ್ರಾರಂಭದ ದಿನಾಂಕ |
|---|---|
| ೩೧೫ | ೧೨-೩-೧೯೮೬ |
| ೩೧೭ | ೨೫-೫-೧೯೮೬ |
| ೩೧೮ | ೯-೧-೧೯೮೭ |

ಆ) ಇವೆ

ಇ) ಕಲಬೆರಕೆ ಹಾಗೂ ಚೆಕ್ ಬೌನ್ಸ್‌ಗಳಿಗೆ ನೋಟೀಸು ನೀಡಿರುವ ವಿವರ

ಬೂತ್ ಸಂಖ್ಯೆ ೩೧೦

| | |
|---|---|
| ಚೆಕ್‌ಬೌನ್ಸ್ | ೫ ನೀಡಲಾಗಿದೆ |
| ಕಲಬೆರಕೆ | ೧ |

ಬೂತ್ ಸಂಖ್ಯೆ ೩೧೫

| | |
|---|---|
| ಚೆಕ್‌ಬೌನ್ಸ್ | ೬ |
| ಕಲಬೆರಕೆ | ೩ |

ಬೂತ್ ಸಂಖ್ಯೆ ೩೧೮

| | |
|---|---|
| ಚೆಕ್‌ಬೌನ್ಸ್ | ೮೧ |
| ಕಲಬೆರಕೆ | ೪ |

ಈ) ಪೂಜೆ ಯೋದರು ದೊರಕದೆ ಇರುವುದರಿಂದ

ಉ) ಕ್ರಮ ಕೈಗೊಳ್ಳಲಾಗುವುದು.

## ಹಾಸನ ಜಿಲ್ಲೆಯಲ್ಲಿ ಕುಡಿಯುವ ನೀರಿನ ಯೋಜನೆಗಳು

೧೮೮೯. ಶ್ರೀ ಕೆ. ಹೆಚ್. ಹನುಮೇಗೌಡ (ಹಾಸನ).—ಮಾನ್ಯ ಗ್ರಾಮೀಣ ಅಭಿವೃದ್ಧಿ, ಪಂಚಾಯತ್‌ರಾಜ್, ವಾರ್ತಾ ಮತ್ತು ಪ್ರಚಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಹಾಸನ ಜಿಲ್ಲೆಯ ಯಾವ ಯಾವ ಕ್ಷೇತ್ರಗಳಲ್ಲಿ ಎಷ್ಟು ಮಿನಿ ವಾಟರ್ ಸಪ್ಲೆ ಸ್ಕೀಮ್‌ಗಳು ಮಂಜೂರಾಗಿ ಕಾರ್ಯಗತವಾಗಿದೆ:(ಕ್ಷೇತ್ರವಾರು ವಿವರ ನೀಡುವುದು)

ಆ) ಜಿಲ್ಲೆಯ ಯಾವ ಯಾವ ಕ್ಷೇತ್ರಗಳಲ್ಲಿ ಪೈಸ್ಡ್ ವಾಟರ್ ಸಪ್ಲೆ ಸ್ಕೀಮುಗಳು ಕಾರ್ಯಗತವಾಗಿವೆ? (ವಿವರ ನೀಡುವುದು)

ಶ್ರೀ ಎಂ. ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ವಾರ್ತಾ ಮತ್ತು ಪ್ರಚಾರ ಇಲಾಖೆಯ ಸಚಿವರು).—

ಅ) ಮಂಜೂರಾಗಿರುವ ಯೋಜನೆಗಳು-೩೨೭ ಕಾರ್ಯಗತವಾಗಿರುವ ಯೋಜನೆಗಳು-೨೪೪ ೩೧-೩-೧೯೯೦ ರಂತೆ ಇರುವ ವಿವರಗಳು ಈ ಕೆಳಗಿನಂತಿದೆ.

| ಕ್ಷೇತ್ರದ ಹೆಸರು | ಮಂಜೂರಾಗಿರುವ ಯೋಜನೆಗಳು | ಕಾರ್ಯಗತವಾಗಿರುವ ಯೋಜನೆಗಳು |
|---|---|---|
| ೧) ಬೇಲೂರು | ೪೦ | ೨೮ |
| ೨) ಅರಸೀಕೆರೆ | ೬೨ | ೪೦ |
| ೩) ಗಂಡ್ಸಿ | ೫೫ | ೪೦ |
| ೪) ಶ್ರವಣಬೆಳಗೊಳ | ೨೪ | ೨೨ |
| ೫) ಹೊಳೆನರಸೀಪುರ | ೩೭ | ೩೩ |
| ೬) ಅರಕಲಗೂಡು | ೪೧ | ೩೫ |
| ೭) ಹಾಸನ | ೨೪ | ೨೦ |
| ೮) ಸಕಲೇಶಪುರ | ೪೬ | ೨೬ |

ಆ) ನಲ್ಲಿ ನೀರು ಸರಬರಾಜು ಯೋಜನೆಯನ್ನು ಎಲ್ಲಾ ಕ್ಷೇತ್ರಗಳಲ್ಲೂ ಕಾರ್ಯಗತ ಮಾಡಲಾಗಿದೆ. ೩೧-೩-೯೦ ರಂತೆ ಇವರು ವಿವರಗಳು ಈ ಕೆಳಗಿನಂತಿವೆ:

| | |
|---|---|
| ೧) ಬೇಲೂರು | ೨೧ |
| ೨) ಅರಸಿಕೆರೆ | ೨೧ |
| ೩) ಗಂಡ್ಸಿ | ೧೯ |
| ೪) ಶ್ರವಣಬೆಳಗೊಳ | ೩೧ |
| ೫) ಹೊಳೆನರಸಿಪುರ | ೩೯ |
| ೬) ಅರಕಲಗೂಡು | ೩೦ |
| ೭) ಹಾಸನ | ೨೬ |
| ೮) ಸಕಲೇಶಪುರ | ೨೪ |